Regd. No. M 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 30 ಸಂಚಿಕೆ 85] ಬುಧವಾರ 27—11—46 [ಬಿಡಿ ಪ್ರತಿ 3 ಪೈ

ಹರಿಜನ ದೇವಾಲಯ ಪ್ರವೇಶದ ಬಗ್ಗೆ

ಜಗದ್ಗುರುಗಳ ಪ್ರತಿಭಟನೆ

(ಸ್ವಂ.ಸ . ತಂತಿ)

ಸಿದ್ಧಪುರ ನ 26 — ದ್ವಾರಕಾ ಸಂಸ್ಥಾನಾಧೀಶ ಶ್ರೀ ಜಗದ್ಗುರು ಶಂಕರಾಚಾರ್ಯರು ಸಂಯುಕ್ತ ಪ್ರಾಂತ್ಯದ ಗವರ್ನರಿಗೂ ಪ್ರಧಾನಿ ಪಂತರಿಗೂ ನ್ಯಾಯ ಮಂತ್ರಿಗೂ ಗೃಹ ಮಂತ್ರಿಗೂ ಶಾಸನ ಸಭಾಧ್ಯಕ್ಷರಿಗೂ ಮತ್ತು ಸಂಯುಕ್ತ ಪ್ರಾಂತ್ಯದ ಪ್ರಧಾನ ಕಾರ್ಯದರ್ಶಿಗೂ ತಂತಿಯನ್ನು ಕಳಿಸಿ ಪ್ರಾಂತ್ಯದಲ್ಲಿ ಹರಿಜನ ದೇವಾಲಯ ಪ್ರವೇಶ ಯೋಜನೆಯನ್ನು ಪ್ರತಿಭಟಿಸಿ ಯೋಜನೆಯನ್ನು ವಾಪಸು ತೆಗೆದುಕೊಂಡು ಶಾಂತಿ ರಕ್ಷಣ ಮಾಡಬೇಕೆಂದು ತಿಳಿಸಿರುವರು.

ಂ ಂ

ಗ್ವಾಲಿಯರ್ ಸಂಸ್ಥಾನದ ಅರಸರು ದಿವಾನರು ಮತ್ತು ಗೃಹ ಮಂತ್ರಿಗಳಿಗೆ ತಂತಿ ಕಳಿಸಿ ಉಜ್ಜಯಿನಿ ದೇವಾಲಯಕ್ಕೆ ಹರಿಜನರಿಗೆ ಪ್ರವೇಶಾವಕಾಶವಾಗಬೇಕೆಂಬ ಯೋಜನೆಯನ್ನು ಪ್ರತಿಭಟಿಸಿ ದೇಶದಲ್ಲಿ ಗಲಭೆಯಾಗಲು ಅವಕಾಶವೀಯಬಾರದೆಂದು ತಿಳಿಸಿರುವರು.

ಖಂಡನಾ ಸಭೆ

ವೈಸ್‌ಛಾನ್ಸಲರು ವಿದ್ಯಾರ್ಥಿ ಪ್ರತಿನಿಧಿಗಳಿಗೆ ಭೇಟಿ ಕೊಡದಿದ್ದುದಕ್ಕಾಗಿ ಅಖಿಲ ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ ಶಾಖೆಗಳೆಲ್ಲ ಸಂಸ್ಥಾನಾದ್ಯಂತ ಖಂಡನಾ ಸಭೆ ನಡೆಸುವುವು.

ಸರಕಾರ ವಿರುದ್ಧ

ಕೈರೋ, ನ 24 — ಸರ್ಕಾರದ ವಿರುದ್ಧ ವಿದ್ಯಾರ್ಥಿಗಳ ಪ್ರದರ್ಶನಗಳೂ ಮತ್ತು ಗಲಭೆ ಇನ್ನೂ ನಡೆಯುತ್ತಲೇ ಇವೆ.

ಸರ್ವ ಜಾತಿಗೂ ಹೋಟೆಲು ಪ್ರವೇಶ

ಮದ್ರಾಸ್ ನ 25 — ಮದರಾಸು ಹೋಟಲುಗಳಲ್ಲಿ ಎಲ್ಲಾ ಜಾತಿಗೂ ಪ್ರವೇಶವಿರಬೇಕೆಂದು ನಗರ ಸಭೆ ಆಜ್ಞಾಪಿಸಿದೆ.

ಸಂತಾಪ ಸೂಚನೆ

ಬೆಂಗಳೂರು ನ 26 — ಶ್ರೀ ಟಿ. ಪಿ. ಕೈಲಾಸಂ ನಿಧನದ ಬಗ್ಗೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸಂತಾಪಸೂಚಕ ನಿರ್ಣಯವಾಯಿತು.

ವುನಃ ವಿದ್ಯಾರ್ಥಿಗಳ ಮುಷ್ಕರ

ಕೋಲಾರ, ನ 23 — ಶ್ರೀ ಕೃಷ್ಣ ಸ್ವಾಮಿ ಎಂಬ ಉಪಾಧ್ಯಾಯರು ವಜಾ ಮಾಡಲ್ಪಟ್ಟರು ವಿದ್ಯಾರ್ಥಿಗಳು ಮತ್ತೆ ಮುಷ್ಕರ ನಡೆಸುವುದಾಗಿ ತಿಳಿಯಬಂದಿದೆ.

ಜಿನ್ನಾರವರ ಪತ್ರಿಕಾ ಸಮ್ಮೇಳನ

ಕರಾಚಿ ನ 25 — ಮಿ|| ಜಿನ್ನಾರವರು ಪತ್ರಿಕಾ ಸಮ್ಮೇಳನ ನಡೆಸಿದರು, ಸರಧ್ ಚುನಾವಣೆಯಲ್ಲಿ ಎಲ್ಲಾ ಸ್ಥಾನಗಳನ್ನು ಲೀಗಿಗೆ ದೊರೆಕಿಸುವ ಸಲುವಾಗಿ ಬಂದಿರುವುದಾಗಿ ತಿಳಿಸಿದರು. ಈಗಿನ ಸರ್ಕಾರ ನೆಹ್ರೂ ಸರ್ಕಾರವೇ ಅಲ್ಲವೆಂದರು. ಬ್ರಿಟಿಷ್ ರಾಜರ ಪಕ್ಷ ಕಾಂಗ್ರೆಸ್ ಎಂದರು. ಕಾಂಗ್ರೆಸ್ ಸಮಾವೇಶದ ಭಾಷಣಗಳು ಉರಿಯುವ ಬೆಂಕಿಗೆ ತುಪ್ಪ ಹಾಕಿರುವುದಾಗಿದೆ ಎಂದರು. ಜಾತಿಗಳು ಸೌಹಾರ್ದದಿಂದಿರಬೇಕಾದರೆ ಜನಗಳನ್ನು ವರ್ಗ ಮಾಡಬೇಕೆಂದರು. ಪಾಕೀಸ್ತಾನ ಬೇಕೇ ಬೇಕು. ಆ ಪ್ರಶ್ನೆಯನ್ನು ತಳಿಯಲಾಗದು ಎಂದರು. ಎಂದಿಗೂ ಲೀಗ್ ಕಾಂಗ್ರೆಸ್ಸಿನ ಆಡಳಿತದಲ್ಲಿರುವುದಿಲ್ಲ ಎಂದೂ ತಿಳಿಸಿದರು.

— —

ಬೆಂಗಳೂರು, ನ 26 — ನಗರ ಮತ್ತು ದಂಡಿನಲಿ ಮೊಹರಂ ಹಬ್ಬದಲ್ಲಿ ಅನೇಕ ನಿರ್ಬಂಧಗಳನ್ನು ಜಾರಿ ಮಾಡಲಾಗಿದೆ.

ರಷ್ಯನರಿಂದ ನಿರ್ಮಾಣ

ಅಗಾಧ ಅಣುಶಕ್ತ್ಯಾಲಯ !

ರಷ್ಯನರ ಅಣುಶಕ್ತ್ಯಾಲಯ

ಲಂಡನ್ ನ 25 — ಕಪ್ಪು ಕಡಲಿನ ರೇವು ಸುಖಂ ಹತ್ತಿರ ರಷ್ಯಾನರು ಅಗಾಧವಾದ ಅಣುಶಕ್ತ್ಯಾಲಯವನ್ನು ನಿರ್ಮಿಸುತ್ತಿದ್ದಾರೆಂದೂ ಇದರ ಕಟ್ಟೋಣವನ್ನು ರಷ್ಯಾ ಪೈಜ್ಞಾನಿಕರು ಜರ್ಮನರ ಸಹಾಯದೊಂದಿಗೆ ನೋಡಿಕೊಳ್ಳುತ್ತಿರುವರೆಂದೂ ಇದು ಒಕ್ಕಿಡ್ಜಿನ ಹತ್ತಿರದಲ್ಲಿರುವ ಅಮೇರಿಕಾ ಸಂಶೋಧನಾಶಾಲೆಯಷ್ಟು ದೊಡ್ಡದೆಂದೂ ಆ ಭಾಗದಲ್ಲಿನ ನೂರಾರು ರೈತರನ್ನು ಆಸ್ಥಳದಿಂದ ಬಿಡಿಸಲಾಗಿದೆಯೆಂದೂ ಪೋಲೀಸು ಮತ್ತು ಸಶಸ್ತ್ರ ಸೈನಿಕರು ಅಲ್ಲಿದ್ದು ಸಿಕ್ಕಿದ ಜನರನ್ನು ಅಲ್ಲಿಗೆ ಹೋಗಿಗೊಡಕ್ಕಿಲ್ಲವೆಂದೂ ನ್ಯೂಸ್ ಕ್ರಾನಿಕಲ್ ಪತ್ರಿಕೆಯ ಇಸ್ತಂಬಾಲ್ ಬಾತ್ಮೀದಾರ ತಿಳಿಸಿದ್ದಾರೆ.

ತಾತ್ಕಾಲಿಕ ಸರ್ಕಾರದಲ್ಲಿ ಒಡಕು

ಬೊಂಬಾಯಿ, ನ 26 — ರಾಜ್ಯಾಂಗ ನಿರ್ಮಾಣ ಸಭೆಯನ್ನು ಬಹಿಷ್ಕರಿಸಿ ಮಂತ್ರಿ ಮಂಡಲದಲ್ಲಿ ಲೀಗು ಉಳಿಯುವುದು ಸಾಧ್ಯವೇ ? ಎಂಬುದಾಗಿ ಪಂ|| ನೆಹರು ವೈಸ್ರಾಯರಿಗೆ ಪತ್ರ ಬರೆದಿದ್ದಾರೆ. ಲೀಗ್ ಮತ್ತು ಕಾಂಗ್ರೆಸ್‌ಗಳು ಮಾಡಿರುವ ಭಾಷಣದಿಂದ ಅಸಹಕಾರ ತಲೆದೋರಿದೆಯೆಂದು ಹೇಳಲಾಗುತ್ತಿದೆ ಆದುದರಿಂದ ಸರ್ಕಾರದಲ್ಲಿ ಒಡಕು ಹುಟ್ಟಬಹುದೆಂದು ಹೇಳಲಾಗುತ್ತಿದೆ.

ಕಾಂಗ್ರೆಸ್ ಭಾಗವಹಿಸುವುದಿಲ್ಲ

ಬೆಂಗಳೂರು ನ 26 — ಕಾಂಗ್ರೆಸ್ ಪೌರಸಭೆಯ ಉಪಚುನಾವಣೆಯಲ್ಲಿ ಭಾಗವಹಿಸಕೂಡದೆಂದು ನಿರ್ಧರಿಸಿದೆ.

ಸಾಂಗ್ಲಿಯಲ್ಲಿ ಕನ್ನಡ ತಲೆ ಎತ್ತುವುದೇ

ಸಾಂಗ್ಲಿ ಸಂಸ್ಥಾನದ ಮುಖ್ಯ ಮಂತ್ರಿಪದವಿಯು ಶ್ರೀ ರಾಜೇಸಾಹೇಬರ ಅನುಗ್ರಹದ ಫಲವಾಗಿ ಅಚ್ಚ ಕನ್ನಡಿಗರಾದ ಶ್ರೀ ಬಿ ಎಸ್. ಕೋಠೆ, ಬಿ. ಎ. ಎಲ್.ಎಲ್.ಬಿ. ಅವರಿಗೆ ಪ್ರಾಪ್ತವಾಗಿದೆ ಇನ್ನು ಮುಂದೆ ಅಲ್ಲಿ ಕನ್ನಡ ತಲೆಯೆತ್ತಬಹುದೆಂದು ಭಾವಿಸಲಾಗಿದೆ

ಜಮೀನ್ದಾರರು ಮತ್ತು ರೈತರ ಜಗಳ

ಮಧುರಾ ನ 25 — ಬೆಳೆಯನ್ನು ಹಂಚಿಕೊಳ್ಳುವ ವಿಷಯದಲ್ಲಿ ಜಮೀನ್ದಾರರಿಗೂ ರೈತರಿಗೂ ಜಗಳವಾಗಿ 3000 ಎಕರೆ ಜಮೀನು ವ್ಯವಸಾಯವಿಲ್ಲದೆ ಪಾಳು ಬಿದ್ದಿದೆ ರೈತರು ಬೇಡಿದ ಅರ್ಧ ಬೆಳೆಯನ್ನು ಜಮೀನ್ದಾರರು ಕೊಡಲು ಒಪ್ಪಿರುವುದಿಲ್ಲ.

೫೦೦೦ ನಿರಾಶ್ರಿತರು

ಕಲ್ಕತ್ತಾ ನ 25 — ಪರಿಹಾರ ಕೇಂದ್ರಗಳಲ್ಲಿ ೫೦೦೦ ಮಂದಿ ಬಿಹಾರಿನ ನಿರಾಶ್ರಿತರಿರುವರೆಂದು ಹೇಳಲಾಗಿದೆ.

ಮನೆಯಿಂದ ಅಡಿಗೆ ಕೋಣೆ ಬಿದ್ದಿತು

ವಿಟ್‌ಬಿ ನ 25 — ಕಿಂಗ್ಸ್ ಸ್ಟ್ರೀಟಿನ ತನ್ನ ಮನೆಯಲ್ಲಿ ಸ್ಕೆಲ್ಟ್ ಎಂಬಾಕೆ ಟೀ ತಯಾರಿಸುತ್ತಿದ್ದಾಗ ಅಡಿಗೆ ಕೋಟೆಯು ಮನೆಯಿಂದ ಪ್ರತ್ಯೇಕವಾಗಿ 65 ಅಡಿ ಎತ್ತರದಿಂದ ಹತ್ತಿರವಿದ್ದ ಸಮುದ್ರಕ್ಕೆ ಬಿದ್ದಿತಂತೆ !

ಹೊಸ ರೈಲು ಮಾರ್ಗ

ಪೆಷಾವರ್ ನ 25 — ವಾಯವ್ಯ ಗಡಿಗೂ ಕಾಟೂಲಿಗೂ ರೈಲು ಮಾರ್ಗ ಹಾಕುವ ಯೋಜನೆಯನ್ನು ಆಫ್ಘಾನ್ ಸರಕಾರ ಪರ್ಯಾಲೋಚಿಸುತ್ತಿದೆ.

ವೈಸರಾಯರಿಗೆ ಜಗದ್ಗುರುಗಳ ತಂತಿ

(ಸ್ವಂ.ಸು. ತಂತಿ)

ಸಿದ್ಧಪುರ ನ 26 — ಶ್ರೀ ದ್ವಾರಕಾ ಪೀಠದ ಜಗದ್ಗುರುಗಳು ವೈಸರಾಯರಿಗೆ ಈ ರೀತಿ ತಂತಿ ಕಳುಹಿಸಿದ್ದಾರೆ ಸಧ್ಯ ದೇಶವು ತೀವ್ರ ಅಂದೋಳನ ಸ್ಥಿತಿಯಲ್ಲಿರುವಾಗಲೇ ರಾಜ್ಯಾಂಗ ರಚನಾತ್ಮಕ ಸಭೆಯನ್ನು ನಡೆಸುವ ಬಗ್ಗೆ ಸನಾತನ ಹಿಂದೂಗಳಿಗೆ ಗಾಬರಿಯುಂಟಾಗಿದೆ. ಹಿಂದೂಗಳನ್ನು ಮತವಿರುದ್ಧ ಶಾಸನಗಳಿಂದ ರಕ್ಷಿಸಲು ಸನಾತನ ಹಿಂದೂಗಳ ಪ್ರತಿನಿಧಿಗಳು ರಾಜ್ಯಾಂಗ ಸಮಿತಿಯಲ್ಲಿರಬೇಕು ಇದನ್ನು ಏರ್ಪಡಿಸಿರಿ. ಮತ್ತು ದೇಶದಲ್ಲಿ ಶಾಂತಿ ಸ್ಥಾಪನೆಯಾಗುವರೆಗೆ ರಾಜ್ಯಾಂಗ ಸಭೆ ಮುಂದೆ ಹಾಕಿರಿ.

ಲೀಗು ಹಿಟ್ಲರನ ತಂತ್ರ ನಡೆಸುತ್ತಿದೆ

ಮಾರತ್ ನ 24 — ಕಾಂಗ್ರೆಸ್ ಸಭೆಯಲ್ಲಿ ಕೋಮುವಾರು ಗಲಭೆ ಸಂಬಂಧದ ನಿರ್ಣಯದ ಮೇಲೆ ಭಾಷಣ ಮಾಡುತ್ತಾ ಪಂ|| ನೆಹರೂರವರು ಲೀಗು ಹಿಟ್ಲರಿನ ತಂತ್ರವನ್ನು ಕಾಪಿ ಮಾಡುತ್ತಿರುವುದೆಂದು ಹೇಳಿದರು.

ಶ್ರೀರಂಗಪಟ್ಟಣ

ಸೀಮೆಯೆಣ್ಣೆ ತೊಂದರೆ

ಸ್ವಂ.ಸು.] ತಾ || ನ 26

ಈ ಊರಿನಲ್ಲಿ ಸೀಮೆ.ಯೆಣ್ಣೆ ಸಿಕ್ಕದೆ ಜನಗಳಿಗೆ ಬಹಳ ತೊಂದರೆಯಾಗಿರುತ್ತದೆ. ಮುರಿಚನಿರವೆಲ್ಲೂ ಇಲ್ಲಿಯ ವೆಂಕಣ್ಣನವರ ಅಂಗಡಿ ಕೊಡುತ್ತಾ ಇದ್ದರು ಈಗ ಅಂಗಡಿಗೆ ಕೊಡುತ್ತಾ ಇಲ್ಲ ಈಗಲಾದರು ಆ ಅಂಗಡಿಗೆ ಕೊಟ್ಟು ಸೀಮೆಯೆಣ್ಣೆಯನ್ನು ಸರಿಯಾಗಿ ದೊರೆಯುವಂತೆ ಮಾಡುತ್ತಾರೆಂದು ಕೋರುತ್ತೇವೆ.

ಪಾಕೇಜು ನಡೆಯಬೇಕು

ಈ ಊರಿನಲ್ಲಿ ಪ್ರತಿಯೊಂದು ಬಚ್ಚಲುಗಳಲ್ಲಿ ನೀರು ನಿಂತು ದುರುವಾಸನೆ ಮತ್ತು ಸೊಳ್ಳೆಗಳು ವಿಪರೀತವಾಗಿರುತ್ತದೆ ಇದಕ್ಕೆ ಸಂಬಂಧ ಪಟ್ಟವರು ಕೂಡಲೆ ಸರಿಪಡಿಸಬೇಕು.

ಆಸ್ಪದವಿಲ್ಲ

ಈ ಊರಿನ ಸೋಪಾನ ಘಟ್ಟದಲ್ಲಿರುವ ಶ್ರೀ ಕಾವೇರಿ ಶ್ರೀನಿವಾಸ ಸ್ವಾಮಿಯವರ ದೇವಸ್ಥಾನದ ಒಳಗೆ ಯಾರು ದಿನಕಾಲಗಳನ್ನು ಮಾಡಕೂಡದು.

ಮೈಸೂರು

ರಾಜಧಾನಿಯಲ್ಲಿ ಬೆಂಕಿ ಪೆಟ್ಟಿಗೆಯು ಅಭಾವವಾಗಿರುವುದು.

At Opera

5th Glorious Week

ಶ್ರೀ ಮು ರು ಗ ನ್

From 29–11–46

ಕಾಳಿ ಎನ್. ರತ್ನ, ಬಿ.ಎಸ್.ದೊರೆರಾಜ್
ಸ್ವಾಮಿನಾಥನ್, ಬಿ.ಎಸ್. ಕೃಷ್ಣವೇಣಿ
ರಾಜಾಕಾಂತಂ ಪಾತ್ರವಹಿಸಿರುವ

ಉ ತ್ತ ಮಿ

(ತಮಿಳು ಚಿತ್ರ)

Morning Shows From 29-11'46

DILLINGER

Edited, Printed and Published by M. S Krishna Rao at the Satyavadi Press Chamaraj Agrahr Mysore.

At Ranjit_____ From 28–11–46

ಹು ಮಾ ಯೂ ನ್

ಅಶೋಕಕುಮಾರ್ ವೀಣಾ ನಾಗೇಶ್ ಚಂದ್ರಮೋಹನ್

ಪಾತ್ರವಹಿಸಿರುವರು

HUMAYUN

ಕೈಯನ್ನು ಅತಿ ಚೊಕ್ಕಟವಾಗಿ ಒಗೆದು
— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ;
ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;
ಅದರ ಪ್ರತಿಫಲನನ್ನು ಕಂಡು ನೀವೇ ಬೆರಗಾಗುವಿರಿ.

ಮೈ ಸೂ ರು ಸಾ ಬೂ ನು

ಕೊಳಕು ಬಟ್ಟೆಗಳನ್ನು
ಸ್ವಚ್ಛಗೊಳಿಸುವುದು

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಸುಖ ಆರೋಗ್ಯ ಆನಂದದಾಯಕ ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಇಂಡೆಂಟಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.